ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ : ಮಾನ್ಯ ಉಸ್ತುವಾರಿ ಸಚಿವರ ಮಾತಿಗೆ ನಮ್ಮ ಒಪ್ಪಿಗೆ ಇದೆ. ಈಗ ಅರೆಸ್ಟ್ ಮಾಡುವುದನ್ನು ಅಲ್ಲಿಗೇ ನಿಲ್ಲಿಸಿ ಮತ್ತು 150 ಮಂದಿಯನ್ನು ಏನು ಎಫ್.ಐ.ಆರ್. ನಲ್ಲಿ ಸೇರಿಸಿದ್ದಾರೆ, ಹಳ್ಳಿಹಳ್ಳಿಗೆ ಹುಡುಕಿಕೊಂಡು ಹೋಗಿ ಅವರನ್ನು ಅರೆಸ್ಟ್ ಮಾಡುವಂಥ ಕೆಲಸ ನಿನ್ನೆ ಕೂಡ ನಡೆದಿದೆ. ಇವತ್ತು ಬೆಳಿಗ್ಗೆ ಸಹ ಆಗಿದೆ ಮತ್ತು ಇದನ್ನು ಅವರು ಮತ್ತೆ ಮುಂದುವರೆಸುತ್ತಾರೆ. ಇದನ್ನು ನಿಲ್ಲಿಸುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಧರ್ಮಸಿಂಗ್ : ಇವತ್ತೂ ಆಗುತ್ತಿದೆ ಎನ್ನತಕ್ಕಂಥಾದ್ದನ್ನು ಏನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಈ ಬಗ್ಗೆ ನಾನು ಮತ್ತೆ ಖುದ್ದಾಗಿ ಎಸ್.ಪಿ.ಯವರ ಜೊತೆ ಮಾತನಾಡುತ್ತೇನೆ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಬಾಗೇಪಲ್ಲಿಯಲ್ಲಿ ವೈದ್ಯರ ನಿರ್ಲಕ್ಷ್ಯದಿಂದ ಯುವಕನ ಸಾವು

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ನಿನ್ನೆ ಬಾಗೇಪಲ್ಲಿಯಲ್ಲಿ ವೈದ್ಯರ ನಿರ್ಲಕ್ಷ್ಯದಿಂದಾಗಿ ಒಬ್ಬ 28 ವರ್ಷದ ಯುವಕ ಸಾವಿಗೀಡಾಗಿದ್ದಾನೆ ನಿನ್ನೆ ಬಾಗೇಪಲ್ಲಿಯಲ್ಲಿ ಆ ಯುವಕನ ಶವವನ್ನು ಇಟ್ಟುಕೊಂಡು ಆಸ್ಪತ್ರೆಯಲ್ಲಿ ರಾತ್ರಿಯೆಲ್ಲ ಮುಷ್ಕರವನ್ನು ಮಾಡಿದ್ದಾರೆ. ಅಲ್ಲಿ ಮುಷ್ಕರ ಮಾಡಿದಂಥ ಸಂದರ್ಭದಲ್ಲಿ ಜಿಲ್ಲೆಯ ಡಿ.ಹೆಚ್.ಓ. ಆಗಲೀ, ಅಥವಾ ಬೇರೆ ಉಸ್ತುವಾರಿ ಸಚಿವರಾಗಲೀ ಯಾರೂ ಬರಲಿಲ್ಲ. ಇದು ಅಲ್ಲಿಯ ಅಂಬೇಡ್ಕರ್ ನಗರದಲ್ಲಿರತಕ್ಕಂಥ ಒಬ್ಬ ವ್ಯಕ್ತಿ, 28 ವರ್ಷ ಪ್ರಾಯದ ಯುವಕ, ವಾಂತಿ ಮತ್ತು ಬೇಧಿಯಾದಾಗ, ಬೆಳಿಗ್ಗೆ ಆಸ್ಪತ್ರೆಗೆ ಹೋದಾಗ, ಆ ಡಾಕ್ಟರ್ ಏನು ಮಾಡಿದ್ದಾರೆ ಎಂದರೆ ಮನೆಯಲ್ಲೇ ಟ್ರೀಟ್‌ಮೆಂಟ್ ಕೊಡುವ ಪ್ರಯತ್ನ ಮಾಡಿದ್ದಾರೆ. ಮನೆಯಲ್ಲೇ ಟ್ರೀಟ್‌ಮೆಂಟ್ ಮಾಡಿ 230 ರೂಪಾಯಿಗಳನ್ನು ಆ ಡಾಕ್ಟರ್ ಕೇಳಿದ್ದಾರೆ. ಆದರೆ ಅವರ ಹತ್ತಿರ 230 ರೂಪಾಯಿ ಇಲ್ಲದಿರುವ ಪರಿಸ್ಥಿತಿಯಲ್ಲಿ ಇನ್ನೂರು ರೂಪಾಯಿ ಕೊಟ್ಟರೂ ಕೂಡ ಒಪ್ಪದೆ ಮೂವತ್ತು ರೂಪಾಯಿಗಳನ್ನು ತಂದುಕೊಡಿ, ಅದು ನನಗೆ ಸಿಗುವ ಕೂಲಿ ಎಂದು ಕೇಳಿದ್ದಾರೆ. ಆ ವೈದ್ಯರು ನಿರ್ಲಕ್ಷ್ಯ ತೋರಿಸಿ ಸುಮಾರು ಐದು ಗಂಟೆವರೆಗೆ ಕೂಡ ಪೇಶೆಂಟ್‌ನ್ನು ಅವರ ಮನೆಯಲ್ಲಿಟ್ಟುಕೊಂಡಿದ್ದಾರೆ. ಪಕ್ಕದ ಕಾಂಪೌಂಡ್‌ನಲ್ಲಿ50 ಹಾಸಿಗೆಗಳಿರುವ ಆಸ್ಪತ್ರೆ ಇದೆ. ಆದರೆ ಅಲ್ಲಿ ಡಾಕ್ಟರ್‌ಗಳು ಯಾರೂ ಇಲ್ಲ. ಯಾವ ವೈದ್ಯಕೀಯ ಸೌಲಭ್ಯಗಳೂ ಅಲ್ಲಿ ಇಲ್ಲ. ತಾಲ್ಲೂಕಿನಲ್ಲಿರತಕ್ಕಂಥ ಒಂದು ಆಸ್ಪತ್ರೆಯಲ್ಲಿ ಸುಮಾರು ವರ್ಷಗಳಿಂದ ವೈದ್ಯರು ಇಲ್ಲದೆ ಅಲ್ಲಿ ವೈದ್ಯಕೀಯ ತಪಾಸಣೆ ನಡೆಯುವಂತಿಲ್ಲ. ಅಲ್ಲಿ ಔಷದಿಗಳು ಕೂಡ ಸಿಗುತ್ತಿಲ್ಲ. ಇವತ್ತು ಒಬ್ಬ ಡಾಕ್ಟರ್ ಶ್ರೀ ಬಾಲಸುಬ್ರಹ್ಮಣ್ಯಂ ಎನ್ನುವವರು ತಮ್ಮ ಮನೆಯಲ್ಲೇ ವೈದ್ಯಕೀಯ ಸೌಲಭ್ಯ ಕೊಡುತ್ತೇನೆ ಎಂದು ಹೇಳಿ, ಇನ್ನೂರು ರೂಪಾಯಿ ತೆಗೆದುಕೊಂಡು ಹುಡುಗನಿಗೆ ಯಾವುದೇ ತರಹ ಟ್ರೀಟ್‌ಮೆಂಟ್ ಮಾಡದೆ, ಐದು ಗಂಟೆಯಲ್ಲಿ ಏನು ಮಾಡಿದ್ದಾರೆ ಎಂದರೆ, ಇದು ಬಹಳ ಸೀರಿಯಸ್ ಆಗಿದೆ, ಚಿಕ್ಕಬಳ್ಳಾಪುರಕ್ಕೆ ತೆಗೆದುಕೊಂಡು ಹೋಗಿ ಎಂದು ಹೇಳಿದ್ದಾರೆ. ಅದರಂತೆ ಅವರು ಚಿಕ್ಕಬಳ್ಳಾಪುರಕ್ಕೆ ಹೋದಾಗ ಗೇಟ್ ಹತ್ತಿರ ಬರುತ್ತಿದ್ದಾಹಾಗೆ ಅವನು ಸತ್ತುಹೋಗಿದ್ದಾನೆ. ಅಲ್ಲಿ ಅಂಬುಲೆನ್ಸ್ ಕೂಡ ಇದೆ. ಆದರೆ ಅದನ್ನು ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಸುಮಾರು 2 ವರ್ಷಗಳ ಹಿಂದೆ ಐದಾರು ಲಕ್ಷ ರೂಪಾಯಿಗಳಿಗೆ

ಅಂಬುಲೆನ್ಸ್‌ನ್ನು ಖರೀದಿ ಮಾಡಿ ಬಾಗೇಪಲ್ಲಿ ಆಸ್ಪತ್ರೆಯಲ್ಲಿ ಶೋಕೇಸ್‌ನಲ್ಲಿ ಇಟ್ಟಿದ್ದಾರೆ. ಅದಕ್ಕೆ ಒಬ್ಬ ಡ್ರೈವರ್ ಕೂಡ ಇಲ್ಲ. ನಾನು ಕೂಡ ಕೋಲಾರದ ಕೆ.ಡಿ.ಪಿ. ಮೀಟಿಂಗ್‌ನಲ್ಲಿ, ಉಸ್ತುವಾರಿ ಸಚಿವರ ಮುಂದೆ ಹೇಳಿದ್ದೇನೆ. ಅದಕ್ಕೆ ಒಬ್ಬ ಡ್ರೈವರ್ ಇಲ್ಲದೆ ಆಂಬುಲೆನ್ಸ್‌ನ್ನು ಕೊಟ್ಟಿದ್ದೀರಿ ಎಂದು ಹೇಳಿದ್ದೇನೆ. ಎಮರ್ಜೆನ್ಸಿ ಕೇಸ್ ಬಂದರೆ ರೋಗಿಯನ್ನು ಸಾಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಬಹಳ ಸಾರಿ ಉಸ್ತುವಾರಿ ಮಂತ್ರಿಗಳು ಮತ್ತು ಜಿಲ್ಲಾ ಪಂಚಾಯತ್ ಕಾರ್ಯದರ್ಶಿ ಅವರಿಗೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ ಎಂದು ಹೇಳಿದ್ದೇನೆ. ಆಂಬುಲೆನ್ಸ್‌ನ್ನು ಕೊಟ್ಟಿದ್ದರೆ ಆ ರೋಗಿ ಬದುಕುತ್ತಿದ್ದ. ಇದರ ಜೊತೆಗೆ ಆ ವ್ಯಕ್ತಿಯ ಕುಟುಂಬ ಬಹಳ ಬಡತನದಲ್ಲಿ ಇದೆ. ಮನೆಯಲ್ಲಿ ಆತನೊಬ್ಬನೇ ಆಧಾರವಾಗಿದ್ದವನು, ಇವತ್ತು ಸತ್ತು ಹೋಗಿದ್ದಾನೆ. ಅಲ್ಲಿ ಶವವನ್ನು ಆಸ್ಪತ್ರೆ ಮುಂದೆ ಇಟ್ಟುಕೊಂಡು ಕುಳಿತಿದ್ದಾರೆ. ಇವತ್ತು ಅವರಿಗೆ ಯಾವುದೇ ಪರಿಹಾರ ಕೊಟ್ಟಿಲ್ಲ ಮತ್ತು ಆ ಡಾಕ್ಟರ್‌ನ್ನು ಸಸ್ಪೆಂಡ್ ಮಾಡಿಲ್ಲ. ಇಷ್ಟೆಲ್ಲಾ ನಡೆದರೂ ಕೂಡ ಅದರ ಬಗ್ಗೆ ಯಾರೂ ಸೂಕ್ತ ಕ್ರಮ ತೆಗೆದು ಕೊಂಡಿಲ್ಲ. ಮಾನ್ಯ ಅಧ್ಯಕ್ಷರೇ, ತಾವು ನಮ್ಮ ಜಿಲ್ಲೆಯವರೇ ಆಗಿರುವುದರಿಂದ ತಮಗೆಲ್ಲಾ ಗೊತ್ತಿದೆ. ನಮ್ಮ ಜಿಲ್ಲೆಯಲ್ಲಿ ಯಾವರೀತಿ ವೈದ್ಯಕೀಯ ಸೌಲಭ್ಯಗಳನ್ನು ಪೂರೈಸುತ್ತಿದ್ದಾರೆ ಎಂಬುದು ತಮಗೆ ಗೊತ್ತು. ಅದರಲ್ಲೂ ಗಡಿನಾಡ ಪ್ರದೇಶವಾದಂಥ ಬಾಗೇಪಲ್ಲಿ, ಗುಡಿಬಂಡೆ ಮತ್ತು ನಗರಗೆರೆಯಲ್ಲಿ ವೈದ್ಯಕೀಯ ಸೌಲಭ್ಯಗಳು ಇಲ್ಲದೆ ಜನರು ಕಂಗಾಲಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಇದನ್ನು ತಾವು ಅರ್ಥ ಮಾಡಿಕೊಂಡಿದ್ದೀರಿ. ಆದ್ದರಿಂದ ಸೂಕ್ತ ವೈದ್ಯಕೀಯ ಸೌಲಭ್ಯ ಕೊಡದೇ ಇದ್ದಂಥ ಆ ಡಾಕ್ಟರ್‌ನ್ನು ಅಮಾನತ್ತಿನಲ್ಲಿಡಬೇಕು ಮತ್ತು ಅವನನ್ನೇ ನಂಬಿಕೊಂಡಿರುವಂಥ ಆ ಸಂಸಾರಕ್ಕೆ ಒಂದು ಲಕ್ಷ ರೂಪಾಯಿಗಳ ಪರಿಹಾರ ಕೊಟ್ಟು ಅವರು ಬದುಕುವುದಕ್ಕೆ ದಾರಿ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಯವರು) : ಸನ್ಮಾನ್ಯ ಅಧ್ಯಕ್ಷರೇ, ಈಗ ಅರ್ಧಗಂಟೆ ಹಿಂದೆ ಮಾನ್ಯ ಸದಸ್ಯರಾದ ಶ್ರೀ ಎನ್ ಸಂಪಂಗಿಯವರು ನನಗೆ ಈ ವಿಷಯವನ್ನು ತಿಳಿಸಿದರು. ಅವರು ಮುಂಜಾನೆ ಸ್ವಲ್ಪ ಫೋನ್ ಮಾಡಿದ್ದರೆ ನಾನು ಏನಾದರೂ ಮಾಹಿತಿ ತರಿಸಿಕೊಂಡು ಸರಿಯಾದ ಉತ್ತರ ಕೊಡಬಹುದಾಗಿತ್ತು. ಆದ್ದರಿಂದು ನಾನು ನಾಳೆ ಉತ್ತರ ಕೊಡುತ್ತೇನೆ. ಅವರು ಅಲ್ಲಿ ಔಷಧಿಗಳು ಇಲ್ಲ, ಡ್ರೈವರ್ ಇಲ್ಲವೆಂದು ಹೇಳಿದರು. ಈ ಸರ್ಕಾರ ಬಂದಮೇಲೆ ಎಲ್ಲ ಆಸ್ಪತ್ರೆಗಳ ಅಭಿವೃದ್ಧಿ ಮಾಡುವ ದೃಷ್ಟಿಯಿಂದ ಎಲ್ಲಾ ಔಷಧಿಗಳನ್ನು ಒದಗಿಸಿಕೊಡಬೇಕೆಂದು ನಾವು ಹೇಳಿದ್ದೇವೆ. ಈ ಬಗ್ಗೆ ನಾನು ರಿಪೋರ್ಟ್ ತರಿಸಿಕೊಳ್ಳುತ್ತೇನೆ. ಒಂದು ವೇಳೆ ಅವರು ಆ ರೀತಿ ನಡೆದುಕೊಳ್ಳದಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳುತ್ತೇನೆ, ಎಂದು ಈ ಸದನದಲ್ಲಿ ನಾನು ಅನೇಕ ಸಲ ಹೇಳಿದ್ದೇನೆ. ಅದು ವೈದ್ಯರ ಕೊರತೆ ಇರಬಹುದು, ತಂತ್ರಜ್ಞರ ಕೊರತೆ ಇರಬಹುದು, ಡ್ರೈವರುಗಳ ಕೊರತೆ ಇರಬಹುದು. ಆ ಕೊರತೆಯನ್ನು ತುಂಬಲು ನಾವು ಸಂಬಂಧಪಟ್ಟು ಜಿಲ್ಲಾಧಿಕಾರಿಗಳಿಗೆ ಸಂಪೂರ್ಣ ಅಧಿಕಾರವನ್ನು ಕೊಟ್ಟಿದ್ದೇವೆ. ತಾವು ಉಸ್ತುವಾರಿ ಮಂತ್ರಿಗಳ ಹತ್ತಿರ ಹೋಗುವುದು ಬೇಕಾಗಿಯೇ ಇಲ್ಲ. ನೇರವಾಗಿ ಜಿಲ್ಲಾಧಿಕಾರಿಗಳ ಹತ್ತಿರ ಹೋಗಿ, ಅಲ್ಲಿ ಡ್ರೈವರ್ ಇಲ್ಲದಿದ್ದರೆ ಅವರಿಂದ ಡ್ರೈವರನ್ನು ನೇಮಕಾತಿ ಮಾಡಿಸಿಕೊಳ್ಳಬಹುದು.

ಶ್ರೀ ಬಿ.ಎನ್. ಬಚ್ಚೇಗೌಡ : ಚಿಕ್ಕಮಗಳೂರಿನಲ್ಲಿ ಒಬ್ಬ ಹೆಣ್ಣುಮಗಳಿಗೆ ಆದ ಘಟನೆ ಬಗ್ಗೆ ಇಲ್ಲಿ ಪ್ರಸ್ತಾಪವಾದಾಗ ತಾವು ಇಲ್ಲಿರಲಿಲ್ಲ. ಅವತ್ತು ಉಸ್ತುವಾರಿ ಸಚಿವರಾದ ಮಾನ್ಯ ಸಗೀರ್ ಅಹಮದ್‌ರವರು ಪರಿಹಾರದ ಬಗ್ಗೆ ಘೋಷಣೆ ಮಾಡಿ, ಅದರ ಬಗ್ಗೆ ತನಿಖೆ ಮಾಡಿ ವೈದ್ಯಾಧಿಕಾರಿಗಳನ್ನು ಅಮಾನತ್ತಿನಲ್ಲಿಡುತ್ತೇವೆಂದು ಹೇಳಿದ್ದರು. ಸದನ ನಡೆಯುತ್ತಿರುವಾಗಲೇ ಎರಡು ಪ್ರಕರಣಗಳು ನಡೆದಿವೆ. ಬಾಗೆಪಲ್ಲಿಯಲ್ಲಿ ಆದಂಥ ಘಟನೆ ಮತ್ತು ಚಿಕ್ಕಮಗಳೂರಿನಲ್ಲಿ ಆದಂಥ ಘಟನೆಗಳನ್ನು ತಾವು ಸೀರಿಯಸ್ಸಾಗಿ ತೆಗೆದುಕೊಳ್ಳಬೇಕು. ಹಾಗೆ ತೀವ್ರವಾಗಿ ತೆಗೆದುಕೊಂಡು ಮುಂದೆ ಈ ರೀತಿಯಾಗದ ಹಾಗೆ ಸೂಚನೆಗಳನ್ನು ಕೊಡತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು. ತಾವು ಹಿರಿಯ ಸಚಿವರಿದ್ದೀರಿ. ಇದನ್ನು ಲಘುವಾಗಿ ಪರಿಗಣಿಸುವಂತಾದ್ದು ಅಲ್ಲ.

ಡಾ|| ಎ.ಬಿ. ಮಾಲಕರೆಡ್ಡಿ : ನಾನು ಇದನ್ನು ಹಗುರವಾಗಿ ತೆಗೆದುಕೊಂಡಿಲ್ಲ, ಸೀರಿಯಸ್ ಆಗಿಯೇ ತೆಗೆದುಕೊಂಡಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ) : ಮಾನ್ಯ ಅಧ್ಯಕ್ಷರೆ, ಪಿ.ಹೆಚ್.ಸಿ. ಮತ್ತು ಪಿ.ಹೆಚ್.ಯು. ಗಳಲ್ಲಿ ಹಾವು ಕಚ್ಚಿದರೆ ಔಷಧ ಇಲ್ಲ, ನಾಯಿ ಕಚ್ಚಿದರೆ ಔಷಧ ಇಲ್ಲ. ನೀವು ಯಾವ ಯಾವ ಔಷಧಗಳನ್ನು ಕೊಟ್ಟಿದ್ದೀರೋ ಗೊತ್ತಿಲ್ಲ. ಹಳ್ಳಿ ಮಕ್ಕಳಿಗೆ ಏನಾದರೂ ನಾಯಿ ಕಚ್ಚಿದರೆ ಔಷಧ ಬೇಕಾಗುತ್ತದೆ, ಹಾವು ಕಚ್ಚಿದರೆ ಔಷಧ ಬೇಕಾಗುತ್ತದೆ. ಆದರೆ, ಈ ಔಷಧಗಳೇ ಇಲ್ಲ. ದಯವಿಟ್ಟು ಈ ಔಷಧಿಗಳನ್ನು ಪಿ.ಹೆಚ್.ಯು ಮತ್ತು ಪಿ.ಹೆಚ್.ಸಿ.ಗಳಿಗೆ ಮೊದಲು ಕೊಡಬೇಕೆಂದು ತಮ್ಮ ಮೂಲಕ ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎನ್. ಸಂಪಂಗಿ : ಅಲ್ಲಿ, ಪರಿಹಾರಬೇಕೆಂದು ಕೇಳುತ್ತಿದ್ದಾರೆ.

ಡಾ|| ಎ.ಬಿ. ಮಾಲಕರೆಡ್ಡಿ : ಇದನ್ನು ಸದನದಲ್ಲಿ ಏಕೆ ಕೇಳುತ್ತಾರೋ ಗೊತ್ತಿಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರ ಕಳಕಳಿ ಏನಿದೆ, ಅದರ ಬಗ್ಗೆ ಸ್ವಲ್ಪ ಕಾಳಜಿ ವಹಿಸಿ. ಈಗ ಮುಖ್ಯವಾದ ವಿಷಯವನ್ನು ಪ್ರಕಟನೆ ಮಾಡಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳ ಕಛೇರಿಯಿಂದ ಈಗತಾನೆ ನಮಗೆ ಒಂದು ಮೆಸೇಜ್ ಬಂದಿದೆ. ಅವರು ಏರ್-ಪೋರ್ಟನಲ್ಲಿದ್ದಾರಂತೆ. ಅವರು ಅಲ್ಲಿಂದ ಬಂದು ಒಂದು ಇಂಪಾರ್ಟೆಂಟ್ ಸ್ಟೇಟ್‌ಮೆಂಟ್ ಮಾಡುತ್ತಾರಂತೆ. ಇದನ್ನು ಸದನದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಪ್ರಧಾನ ಮಂತ್ರಿಗಳ ಆಫೀಸಿನಿಂದ, ಡಾ|| ರಾಜ್‌ಕುಮಾರ್‌ರವರು ರಿಲೀಸ್ ಆದ ಬಗ್ಗೆ ಮೆಸೇಜ್ ಬಂದಿದೆ.

ಅಧ್ಯಕ್ಷರು : ನನಗೆ ಮುಖ್ಯಮಂತ್ರಿಗಳ ಕಛೇರಿಯಿಂದ ಸಂದೇಶ ಬಂದಿದೆ. ಅವರು ಮೊಬೈಲ್ ಫೋನ್‌ನಲ್ಲಿ ಹೇಳಿದ್ದಾರೆ, ಮುಖ್ಯವಾದ ಸ್ಟೇಟ್‌ಮೆಂಟ್ ಮಾಡಬೇಕಾಗಿದೆ, ಸದನವನ್ನು ಮುಂದಕ್ಕೆ ಹಾಕಬೇಡಿ ಎಂದು ನನಗೆ ತಿಳಿಸಿದ್ದಾರೆ. ಡಾ|| ರಾಜ್‌ಕುಮಾರ್‌ರವರು ಬರುವಾಗ ಸಂತೋಷವಾಗಿರಿ. ಈ ಚರ್ಚೆಗಳೆಲ್ಲಾ ಏಕೆ? ಅವರು ಏರ್-ಪೋರ್ಟ್‌ನಲ್ಲಿದ್ದಾರೆ, ಅಲ್ಲಿಂದ ಮೆಸೇಜ್ ಕಳುಹಿಸಿದ್ದಾರೆ. He